ಡಾ.ಚಂದ್ರಶೇಖರ. ಬಿ
ಮೋ ಸಂಖ್ಯೆ: 9448912063

# ಮೈಸೂರು ವಿಶ್ವವಿದ್ಯಾನಿಲಯ
## ರಾಷ್ಟ್ರೀಯ ಸೇವಾ ಯೋಜನೆ

ಸ್ಥಾಪನೆ : 1916
(Re-accredited by NAAC at "A" Grade with a CGPA of 3.47)
(Ranked 57th overall and 36th among Universities in NIRF ranking 2017)
**Indra Gandhi National Award winner 2015-16**

1969-2019
ಸುವರ್ಣ ಮಹೋತ್ಸವ ವರ್ಷ

ಸಂಖ್ಯೆ. ಮೈವಿವಿ/ರಾಸೇಯೋ/ಡಿಎಲ್‌ಸಿ/404/2018–19 ದಿನಾಂಕ: 15–12–2018

ಗೆ,
ರಾ.ಸೇ.ಯೋ ಘಟಕಗಳು ಅನುಷ್ಠಾನದಲ್ಲಿರುವ
ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಎಲ್ಲಾ ಕಾಲೇಜಿನ ಪ್ರಾಂಶುಪಾಲರು
ಮತ್ತು ರಾ.ಸೇ.ಯೋ ಅಧಿಕಾರಿಗಳಿಗೆ

ಮಾನ್ಯರೆ,

ವಿಷಯಃ– ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾಮಟ್ಟದ ಶಿಬಿರಕ್ಕೆ ಎನ್.ಎಸ್.ಎಸ್ ಸ್ವಯಂಸೇವಕ/ಸೇವಕಿಯರನ್ನು ನಿಯೋಜಿಸುವ ಬಗೆಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕಃ 30–12–2018 ರಿಂದ 05–01–2019 ರವರೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಡುವ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಮಟ್ಟದ ರಾಷ್ಟ್ರೀಯ ಸೇವಾ ಯೋಜನಾ ಶಿಬಿರವನ್ನು **ಇಲವಾಲ ಗ್ರಾಮ, ಮೈಸೂರು ತಾಲ್ಲೂಕು,** (ಗ್ರಾಮ ಪಂಚಾಯಿತಿ ಸಮೂದಾಯ ಭವನದ ಆವರಣ) ಇಲ್ಲಿ, ರಾ.ಸೇ.ಯೋ ಮೈವಿವಿ ಮೈಸೂರು ಮತ್ತು **ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು** ರವರು ಹಮ್ಮಿಕೊಂಡಿದ್ದು ಈ ಜಿಲ್ಲಾ ಮಟ್ಟದ ಶಿಬಿರಕ್ಕೆ ನಿಮ್ಮ ಕಾಲೇಜಿನ ರಾ.ಸೇ.ಯೋ ಘಟಕದಿಂದ ಎರಡು ಮಂದಿ ಸ್ವಯಂ ಸೇವಕರು (2) ಹಾಗೂ ಒಬ್ಬ ಸ್ವಯಂ ಸೇವಕಿಯನ್ನು (1) ಒಟ್ಟು ಮೂರು ಮಂದಿಯನ್ನು (3) ನಿಯೋಜಿಸುವಂತೆ ತಿಳಿಸಲಾಗಿದೆ. (ಕೋ–ಎಜುಕೇಷನ್ ಇಲ್ಲದೇ ಇದ್ದಲ್ಲಿ 3 ಜನ ಸ್ವಯಂಸೇವಕ/ಸೇವಕಿಯರನ್ನು ಕಳುಹಿಸಬಹುದು) ಹಾಗೂ ತಾವು ನಿಯೋಜಿಸಿದ ಸ್ವಯಂ ಸೇವಕರು ಶಿಬಿರದ ಸ್ಥಳವಾದ ಇಲವಾಲ ಗ್ರಾಮ, ಮೈಸೂರು **ಜಿಲ್ಲೆ** ಇಲ್ಲಿ ದಿನಾಂಕ: **29–12–2018** ರಂದು **ಸಂಜೆ 5.00** ಗಂಟೆಯೊಳಗೆ ಡಾ.ಎಸ್.ಜಿ.ರಾಮದಾಸರೆಡ್ಡಿ, ಪ್ರೊ.ಮಂಜುಳ.ಎಂ.ಎಲ್ ಮತ್ತು ಪ್ರೊ.ತ್ರಿವೇಣಿ ಶಿಬಿರದ ಸಂಯೋಜನಾಧಿಕಾರಿಗಳು ಇವರಲ್ಲಿ ನೊಂದಣಿ ಮಾಡಿಕೊಳ್ಳುವಂತೆ ಸೂಚನೆ ನೀಡಬೇಕೆಂದು ಈ ಮೂಲಕ ಕೋರಲಾಗಿದೆ.

ತಮ್ಮ ನಂಬುಗೆಯ,

(ಡಾ. ಬಿ. ಚಂದ್ರಶೇಖರ)
ಕಾರ್ಯಕ್ರಮ ಸಂಯೋಜನಾಧಿಕಾರಿ

**ಸೂಚನೆಗಳುಃ–**

1. 2018–19ನೇ ಸಾಲಿನಲ್ಲಿ ಎನ್.ಎಸ್.ಎಸ್ ಗೆ ನೊಂದಾವಣಿಗೊಂಡಿರುವ ಸ್ವಯಂ ಸೇವಕ / ಸೇವಕಿಯರನ್ನು ಮಾತ್ರ ಪ್ರಾಂಶುಪಾಲರ ಅನುಮತಿ ಪತ್ರದೊಂದಿಗೆ ಈ ಶಿಬಿರಕ್ಕೆ ನಿಯೋಜಿಸುವುದು.
2. ಸ್ವಯಂ ಸೇವಕರು ಕಾಲೇಜು ಮಟ್ಟದ ಕನಿಷ್ಠ ಒಂದು ರಾ.ಸೇ.ಯೋ ಶಿಬಿರದಲ್ಲಿ ಪಾಲ್ಗೊಂಡಿರುವವರು ಮತ್ತು ದ್ವಿತೀಯ ವರ್ಷದ ಎನ್.ಎಸ್.ಎಸ್ ನಲ್ಲಿ ನೊಂದಾಯಿಸಿಕೊಂಡಿರುವವರು ಮಾತ್ರ ಈ ಶಿಬಿರಕ್ಕೆ ನಿಯೋಜಿಸುವುದು.
3. ಸ್ವಯಂ ಸೇವಕರು ತುಂಬು ತೋಳಿನ ಬಿಳಿ ಅಂಗಿ, ಪ್ಯಾಂಟ್ ಮತ್ತು ಸ್ವಯಂ ಸೇವಕಿಯರು ಬಿಳಿ ಸೆಲ್ವಾರ್ ಕಮೀಜ ಅನ್ನು ಪ್ರಾರ್ಥನಾ ಸಮಯದಲ್ಲಿ ಮಾತ್ರ ಉಪಯೋಗಿಸಲು ತರಬೇಕು.
4. ಶಿಬಿರದ ನಿಯಮಗಳನ್ನು ಎಲ್ಲಾ ಸ್ವಯಂ ಸೇವಕರು ಕಡ್ಡಾಯವಾಗಿ ಅನುಸರಿಸುವಂತೆ ಸೂಕ್ತ ತಿಳುವಳಿಕೆಯನ್ನು ನೀಡುವುದು.
5. ಶಿಬಿರದ ಅವಧಿಯಲ್ಲಿ ಭಾವಗೀತೆ, ಜನಪದ ಗೀತೆ, ದೇಶಭಕ್ತಿ ಗೀತೆ, ಸಾಮೂಹಿಕ ಜನಪದ ಗೀತೆ, ಸಾಮೂಹಿಕ ದೇಶ ಭಕ್ತಿ ಗೀತೆ, ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಚರ್ಚಾಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಸ್ಪರ್ಧೆಗಳನ್ನು ಹಾಗೂ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಿದ್ದರಾಗಿ ಬರುವುದು.
6. ಸ್ವಯಂ ಸೇವಕರು ರಾ.ಸೇ.ಯೋ ಬ್ಯಾಡ್ಜ್ ಮತ್ತು ಕಾಲೇಜಿನ ಗುರುತಿನ ಪತ್ರ (ಐಡೆಂಟಿಟಿ ಕಾರ್ಡ್) ವನ್ನು ತರುವುದು.
7. ಸ್ವಯಂ ಸೇವಕರುಗಳಿಗೆ ತಮ್ಮ ಕಾಲೇಜಿನಿಂದ ಶಿಬಿರದ ಸ್ಥಳಕ್ಕೆ ತೆರಳಲು ಮತ್ತು ವಾಪಸ್ಸಾಗಲು ತಗಲುವ ಕನಿಷ್ಠ ಪ್ರಯಾಣ ವೆಚ್ಚವನ್ನು 2018–19 ನೇ ಸಾಲಿನ **"ರಾ.ಸೇ.ಯೋ ದೈನಂದಿನ ಚಟುವಟಿಕೆ ನಿಧಿಯಿಂದ"** ನೀಡಬಹುದಾಗಿದೆ.

**ಪ್ರತಿ:–**

1. ಪ್ರಾಂಶುಪಾಲರು / ರಾ.ಸೇ.ಯೋ ಅಧಿಕಾರಿಗಳು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಕಚೇರಿ ಪ್ರತಿ

**ಪು.ತಿ.ನೋ**

**ಕಾರ್ಯಕ್ರಮ ಸಂಯೋಜನಾಧಿಕಾರಿಗಳ ಕಚೇರಿ, ಎನ್.ಎಸ್.ಎಸ್ ಭವನ, ಸರಸ್ವತಿಪುರಂ, ಮೈಸೂರು–09**
ದೂರವಾಣಿ: 0821–2419326, www.uni-mysore.ac.in/NSS E- mail ID: nssuommysore@gmail.com

# ಮೈಸೂರು ವಿಶ್ವವಿದ್ಯಾನಿಲಯ

## ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಮಟ್ಟದ ಅಂತರಕಾಲೇಜು ಶಿಬಿರ

## ಶಿಬಿರಾರ್ಥಿಗಳಿಗೆ ಸೂಚನೆ ಹಾಗೂ ಶಿಬಿರದ ನಿಯಮಗಳು

1. ಶಿಬಿರಕ್ಕೆ ಬರುವ ವಿದ್ಯಾರ್ಥಿಗಳು 2018-19ನೇ ಸಾಲಿನ ಕಾಲೇಜಿನ ರಾ.ಸೇ.ಯೋ ದಾಖಲಾತಿಗಳನ್ವಯ ಎನ್‌ಎಸ್‌ಎಸ್ ಗೆ ತಾವು ನೋಂದಾವಣಿಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ಬರುವುದು.

2. ಶಿಬಿರವು ದಿನಾಂಕಃ 30-12-2018 ರಿಂದ 05-01-2019 ರವರೆಗೆ ಇಲವಾಲ ಗ್ರಾಮ, ಮೈಸೂರು **ತಾಲ್ಲೂಕು** ಇಲ್ಲಿ ನಡೆಯುವುದು. ವಸತಿಯನ್ನು ಗ್ರಾಮ ಪಂಚಾಯಿತಿ ಸಮುದಾಯ ಭವನದ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿದೆ.
3. ದಿನಾಂಕಃ 29-12-2018 ರಂದು ಶನಿವಾರ ಸಂಜೆ 5.00 ಗಂಟೆಯೊಳಗೆ ಸ್ವಯಂ ಸೇವಕರು ಹೋಗಿ ವರದಿ ಮಾಡಿಕೊಳ್ಳುವುದು. ಅನಂತರ ಬರುವವರಿಗೆ ಯಾವುದೇ ಕಾರಣಕ್ಕೂ ಶಿಬಿರದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
4. ಶಿಬಿರದ ಸ್ಥಳವಾದ ಇಲವಾಲ ಗ್ರಾಮ, ಮೈಸೂರಿನಿಂದ 20 ಕಿ.ಮೀ ದೂರದಲ್ಲಿದ್ದು, ಇಲ್ಲಿಗೆ ಮೈಸೂರು ಸರ್ಕಾರಿ ಬಸ್ ನಿಲ್ದಾಣದಿಂದ ಸರ್ಕಾರಿ ಬಸ್ಸುಗಳ ಸೌಲಭ್ಯವಿರುತ್ತದೆ.
5. ಶಿಬಿರಾರ್ಥಿಗಳು ಪ್ರಾರ್ಥನೆಯ ಸಮಯದಲ್ಲಿ ಧರಿಸಲು ಬಿಳಿಯ ವಸ್ತ್ರಗಳನ್ನು ಕಡ್ಡಾಯವಾಗಿ ತರುವುದು ಹಾಗೂ ಶಿಬಿರದ ಅವಧಿಯಲ್ಲಿ ಜೀವನಕ್ಕೆ ಅಗತ್ಯವಾದ ಸರಳ ಉಡುಪು, ಹಾಸಿಗೆ, ಹೊದಿಕೆ, ತಟ್ಟೆ, ಲೋಟ, ಮಗ್ಗು, ಟಾರ್ಚ್, ಒಂದು ಬೀಗದ ಕೀ ಇತ್ಯಾದಿಗಳನ್ನು ತರಬೇಕು. ಇವುಗಳಲ್ಲಿ ಯಾವುದೇ ಇಲ್ಲದಿದ್ದರೂ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಬೆಲೆ ಬಾಳುವ ವಸ್ತುಗಳು, ಹೆಚ್ಚಿನ ನಗದು ಹಣವನ್ನಾಗಲಿ ಶಿಬಿರಕ್ಕೆ ತರಬಾರದು ಹಾಗೂ ಮೊಬೈಲ್ ದೂರವಾಣಿ ತರುವುದು ಮತ್ತು ಶಿಬಿರದ ಆವರಣದಲ್ಲಿ ದೂರವಾಣಿ ಬಳಸುವುದನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ.
6. ಶಿಬಿರದಲ್ಲಿ ಸರಳವಾದ ಸಸ್ಯಾಹಾರ ಊಟ ಮತ್ತು ತಣ್ಣೀರು ಸ್ನಾನದ ಸೌಕರ್ಯ ಮಾತ್ರವಿರುತ್ತದೆ.
7. ಶಿಬಿರದ ಅವಧಿಯಲ್ಲಿ ಎಲ್ಲಾ ಶಿಬಿರಾರ್ಥಿಗಳು ಶಿಬಿರದಲ್ಲಿ ಇರಬೇಕು. ಶಿಬಿರಾಧಿಕಾರಿಗಳ ಅನುಮತಿ ಇಲ್ಲದೆ ಯಾರೂ ಶಿಬಿರದ ಆವರಣವನ್ನು ಬಿಟ್ಟು ಹೋಗುವಂತಿಲ್ಲ.
8. ಶಿಬಿರಾರ್ಥಿಗಳ ಸ್ನೇಹಿತರಾಗಲಿ, ಬಂಧುಗಳಾಗಲಿ, ಶಿಬಿರಾಧಿಕಾರಿಗಳ ಅನುಮತಿ ಇಲ್ಲದೆ ಶಿಬಿರದ ಆವರಣವನ್ನು ಪ್ರವೇಶಿಸಬಾರದು.
9. ಶಿಬಿರದ ವ್ಯವಸ್ಥೆ ಹಾಗೂ ನಿರ್ವಹಣೆಯಲ್ಲಿ ಸಕ್ರಿಯವಾಗಿ ಸಹಕರಿಸಬೇಕು. ಉಂಟಾಗಬಹುದಾದ ಸಣ್ಣಪುಟ್ಟ ಕುಂದುಕೊರತೆಗಳನ್ನು ಸಹಿಸಿಕೊಂಡು ಶಿಬಿರದ ಎಲ್ಲಾ ಚಟುವಟಿಕೆಗಳು ಸುಗಮವಾಗಿ ನಡೆಯುವಂತೆ ಅನುವು ಮಾಡಿಕೊಡಬೇಕು.
10. ಶಿಬಿರದ ಧ್ಯೇಯೋದ್ದೇಶಗಳನ್ನು ಸಾರ್ಥಕಗೊಳಿಸಲು, ಕಾಲೇಜಿನ ಹಾಗೂ ವಿಶ್ವವಿದ್ಯಾನಿಲಯದ ಗೌರವಗಳನ್ನು ಕಾಪಾಡಲು ಪ್ರತಿಯೊಬ್ಬ ವಿದ್ಯಾರ್ಥಿಯು ಶಕ್ತಿಮೀರಿ ಪ್ರಯತ್ನಿಸಬೇಕು.
11. ನದಿಗಳಲ್ಲಿ, ಕೆರೆಗಳಲ್ಲಿ ಈಜಾಡುವುದನ್ನು ನಿಷೇದಿಸಿದೆ. ಆಕಸ್ಮಿಕವಾಗಿ ಆಗುವ ತೊಂದರೆಗಳಿಗೆ ವಿಶ್ವವಿದ್ಯಾನಿಲಯವಾಗಲೀ / ಶಿಬಿರದ ವ್ಯವಸ್ಥಾಪಕರಾಗಲೀ ಜವಾಬ್ದಾರರಲ್ಲ.
12. ಶಿಬಿರದ ನಿಯಮಗಳಿಗೆ ವಿರೋಧವಾಗಿ ನಡೆಯುವವರನ್ನು ತಕ್ಷಣವೇ ಶಿಬಿರದಿಂದ ಹೊರಹಾಕುವ ಅಧಿಕಾರವನ್ನು ಶಿಬಿರದ ನಿರ್ದೇಶಕರು/ಶಿಬಿರದ ಸಂಯೋಜನಾಧಿಕಾರಿಗಳು ಹೊಂದಿದ್ದಾರೆ.
13. ಈ ಮೇಲಿನ ನಿಯಮಗಳಲ್ಲದೆ ಶಿಬಿರದ ನಿರ್ದೇಶಕರು ಕಾಲಕಾಲಕ್ಕೆ ವಿಧಿಸುವ ಯಾವುದೇ ನಿಯಮಗಳನ್ನು ಎಲ್ಲಾ ಶಿಬಿರಾರ್ಥಿಗಳು ಪಾಲಿಸಬೇಕು.
14. ಬರುವಾಗ ಪ್ರಾಂಶುಪಾಲರು ಮತ್ತು ರಾಸೇಯೋ ಅಧಿಕಾರಿಯವರಿಂದ ನಿಮ್ಮನ್ನು ನಿಯೋಜಿಸುತ್ತಿರುವ ಬಗ್ಗೆ ನಿಯೋಜನಾ ಪತ್ರ ಮತ್ತು ಕಾಲೇಜಿನ ಗುರುತಿನ ಪತ್ರವನ್ನು ಕಡ್ಡಾಯವಾಗಿ ತರಬೇಕು. ಇಲ್ಲದಿದ್ದಲ್ಲಿ ಶಿಬಿರದಲ್ಲಿ ಭಾಗವಹಿಸಲು ಸಾಧ್ಯವಿಲ್ಲ.
15. Mandate form ಅನ್ನು ಹಾಗೂ ಪೋಷಕರ ಅನುಮತಿ ಪತ್ರವನ್ನು ಕಡ್ಡಾಯವಾಗಿ ತರಬೇಕು.
16. ಮೊಬೈಲ್ ಫೋನ್‌ಗಳನ್ನು ಶಿಬಿರಕ್ಕೆ ತರಬಾರದು. ತಂದರೆ ಶಿಬಿರಾಧಿಕಾರಿಗಳಿಗೆ ಅದನ್ನು ಒಪ್ಪಿಸಿ ಶಿಬಿರ ಮುಗಿದ ನಂತರ ವಾಪಸ್ಸು ಪಡೆಯುವುದು

ಕಾರ್ಯಕ್ರಮ ಸಂಯೋಜನಾಧಿಕಾರಿ

**ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸುವುದು**

| | | |
|---|---|---|
| 1. | ಡಾ.ಎಸ್.ಜಿ.ರಾಮದಾಸರೆಡ್ಡಿ ಶಿಬಿರದ ಸಂಯೋಜನಾಧಿಕಾರಿಗಳು ಹಾಗೂ ರಾ.ಸೇ.ಯೋ ಅಧಿಕಾರಿಗಳು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | ಮೊಬೈಲ್ – 9845309081 |
| 2. | ಶ್ರೀಮತಿ. ಮಂಜುಳ.ಎಂ.ಎಲ್ ಶಿಬಿರದ ಸಂಯೋಜನಾಧಿಕಾರಿಗಳು ಹಾಗೂ ರಾ.ಸೇ.ಯೋ ಅಧಿಕಾರಿಗಳು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | ಮೊಬೈಲ್ – 9880853513 |